**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ:- 816/2021</u>**

**ಪ್ರಾಸಾಃ- 38 ಚಾಸಾಃ- 53**

| | | |
|---|---|---|
| ಸಾಕ್ಷಿಯ ಹೆಸರು | : | ವಾಸುಕುಮಾರ್ |
| ತಂದೆಯ ಹೆಸರು | : | ಭೋಜಪ್ಪ |
| ವಯಸ್ಸು | : | 43 ವರ್ಷ |
| ವೃತ್ತಿ | : | ಪಿ ಐ, ಕಂಪ್ಲಿ ಪೋಲೀಸ್ ಠಾಣೆ |
| ವಾಸಸ್ಥಳ | : | ಕಂಪ್ಲಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 7.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ:- 09.08.2023 ರಿಂದ ಪೊಲೀಸ್ ಇನ್ಸ್ಪೆಕ್ಟರ್ ಆಗಿ ಕಂಪ್ಲಿ ಪೊಲೀಸ್ ಠಾಣೆಯ ಪ್ರಭಾರದಲ್ಲಿರುತ್ತೇನೆ. ಇದಕ್ಕೂ ಮುಂಚೆ ದಿನಾಂಕ:-29.09.2020 ರಿಂದ 25.04.2022 ರವರಗೆ ಪೊಲೀಸ್ ಇನ್ಸ್ಪೆಕ್ಟರ್ ಆಗಿ ಬಳ್ಳಾರಿ ಮಹಿಳಾ ಠಾಣೆಯ ಪೊಲೀಸ್ ಪ್ರಭಾರದಲ್ಲಿದ್ದೆನು.

ದಿನಾಂಕ:-07.06.2021 ರಂದು ಮದ್ಯಾಹ್ನ 12.30 ಗಂಟೆಗೆ ಪಿರ್ಯಾದಿದಾರರಾದ ಸಿ.ಡಬ್ಲೂ-1 ಶ್ರೀಮತಿ ಶ್ರಾವಣಿ ಗಂಡ ಅನುಪಕುಮಾರ್ ರವರು ಠಾಣೆಯಲ್ಲಿ ಹಾಜರಾಗಿ ನೀಡಿದ ಗಣಕಿಕೃತ ದೂರನ್ನು ಸ್ವೀಕರಿಸಿ ಮಹಿಳಾ ಠಾಣೆ ಗುನ್ನೆ ನಂ:-74/2021 ಕಲಂ:364 ಐಪಿಸಿ ಅಡಿಯಲ್ಲಿ ಗುನ್ನೆ ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ಠಾಣೆಯ ಮಪಿಸಿ-1049 ಕಲ್ಲೂರಿ ಮೇರಿಲತಾ ರವರ ಮುಖಾಂತರ ಮದ್ಯಾಹ್ನ 01.15 ಗಂಟೆಗೆ ಮಾನ್ಯ 04 ನೇ ಎ.ಸಿ.ಜೆ (ಕಿ.ವಿ)ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಬಳ್ಳಾರಿ ರವರಲ್ಲಿ ನಿವೇದಿಸಿಕೊಂಡಿರುತ್ತದೆ. ಸಾಕ್ಷಿ ದೂರನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ)

ಎಂದು ಗುರ್ತಿಸಲಾಯಿತು. ಸಾಕ್ಷಿ ಪ್ರ.ವ.ವರದಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-119 ಸಾಕ್ಷಿ ಸಹಿಯನ್ನು ನಿಪಿ-119(ಎ) ಎಂದು ಗುರ್ತಿಸಲಾಯಿತು.

ಜಯಮ್ಮ ಮತ್ತು ರಾಮಲಕ್ಷ್ಮೀ ಯನ್ನು ಮಲ್ಲಯ್ಯರವರು ಅಪಹರಣ ಮಾಡಿಕೊಂಡು ಹೋದ ಸ್ಥಳವನ್ನು ಈ ಕೇಸಿನ ಪಿರ್ಯಾದಿ ಸಿ.ಡಬ್ಲೂ 1 ಶ್ರಾವಣಿ ಮತ್ತು ಸಾಕ್ಷಿದಾರರಾದ ಸಿಡಬ್ಲೂ 21 ವೆಂಕಟೇಶರವರು ಹೇಳಿ ತೋರಿಸಿದ್ದು, ದಿನಾಂಕ:-07.06.2021 ರಂದು ಮದ್ಯಾಹ್ನ 02.15 ಗಂಟೆಯಿಂದ 03.00 ಗಂಟೆಯವರೆಗೆ ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಚಾ ಸಾ 2 ಎಂ. ಭರತ ಮತ್ತು ಚಾ ಸಾ 3 ಪ್ರಶಾಂತ ರವರ ಸಮಕ್ಷಮದಲ್ಲಿ ನಿಪಿ-5 ರಂತೆ ವಿವರವಾಗಿ ಬರೆಯಿಸಿಕೊಂಡಿರುತ್ತೇನೆ ಮತ್ತು ನಿಪಿ 6 ರಂತೆ ಕೃತ್ಯ ಸ್ಥಳದ ಕಚ್ಚಾ ನಕಾಶೆ ತಯಾರಿಸಿ ಪಂಚನಾಮೆ ವೇಳೆ ನಿಪಿ 7 ರಂತೆ ಫೋಟೊ ಪಡೆಯಲಾಗಿದೆ. ಸಾಕ್ಷಿ ನಿಪಿ 5 ರಲ್ಲಿ ಮತ್ತು ನಿಪಿ 6 ರಲ್ಲಿನ ತನ್ನ ಸಹಿಗಳನ್ನು ನೋಡಿ ಗುರ್ತಿಸಿದ್ದು ಕ್ರಮವಾಗಿ ಅವುಗಳನ್ನು ನಿಪಿ 5(ಇ) ಮತ್ತು ನಿ ಪಿ- 6(ಇ) ಎಂದು ಗುರ್ತಿಸಲಾಗಿದೆ.

ದಿನಾಂಕ:07.06.2021 ರಂದು ಚಾ ಸಾ 21 ವೆಂಕಟೇಶ ಮತ್ತು ಚಾ ಸಾ 22 ಕುಮಾರ್ ರವರಿಗೆ ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದು ಅವರು ನನ್ನ ಮುಂದೆ ನಿಪಿ 31 ಮತ್ತು 34 ರಂತೆ ಹೇಳಿಕೆ ನುಡಿದಿರುತ್ತಾರೆ.

ದಿನಾಂಕ:-07.06.2021 ರಂದು ಈ ಕೇಸಿನ ಆರೋಪಿ ಮಲ್ಲಯ್ಯರವರನ್ನು ಪತ್ತೆ ಮಾಡಲು ಚಾ ಸಾ 45 ಎಂ.ಶೇಕ್ಷವಲಿ ಎ.ಎಸ್.ಐ ಮತ್ತು ಚಾ ಸಾ 46 ಮುಕ್ತಿಯಾರ್ ಅಹಮ್ಮದ್ ಹೆಚ್.ಸಿ454 ರವರಿಗೆ ನೇಮಿಸಿ ಕಳುಹಿಸಿ ಕೊಟ್ಟಿರುತ್ತೇನೆ.

ದಿನಾಂಕ:-08.06.2021 ರಂದು ಬೆಳಿಗ್ಗೆ 04.50 ಗಂಟೆಗೆ ಎ 1 ಮಲ್ಲಯ್ಯರವರನ್ನು ನಮ್ಮ ಸಿಬ್ಬಂದಿ ನನ್ನ ಮುಂದೆ ಹಾಜರು ಪಡಿಸಿದರು. ನಾನು ಆರೋಪಿ ಮಲ್ಲಯ್ಯರವನ್ನು ವಿಚಾರಣೆ ಮಾಡಿ ಆತನ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿದ್ದೆ. 1 ನೇ ಆರೋಪಿಯು ತನ್ನನ್ನು ಕರೆದುಕೊಂಡು ಹೋದಲ್ಲಿ ಕೃತ್ಯಕ್ಕೆ ಬಳಸಿದ ಆಟೋ ಸ್ಟ್ಯಾಟರ್ ರಾಡ್ ಮತ್ತು ಕಾರನ್ನು ತೋರಿಸುವುದಾಗಿ ಹೇಳಿರುತ್ತಾನೆ.

ಸಾಕ್ಷಿ 1 ನೇ ಆರೋಪಿ ಸ್ವಖುಷಿ ಹೇಳಿಕೆಯಲ್ಲಿ ಸದರಿ ಭಾಗವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 120 ಎಂದು, ಸಾಕ್ಷಿಯ ಸಹಿಯನ್ನು ನಿಪಿ 120(ಎ) ಮತ್ತು 1 ನೇ ಆರೋಪಿ ಸಹಿಯನ್ನು 120(ಬಿ) ಎಂದು ಗುರ್ತಿಸಲಾಯಿತು.

ದಿನಾಂಕ:- 08.06.2021 ರಂದು ಗುನ್ನೆ ನಂ:74/2021 ಕಲಂ:364 ಐಪಿಸಿ ಪ್ರಕರಣದಲ್ಲಿ ಕಲಂ:302,201 ಐಪಿಸಿ ಸೇರ್ಪಡೆ ಮಾಡಿಕೊಂಡು ತನಿಖೆ ಮುಂದುವರೆಸಿಕೊಂಡು ಹೋಗಲು ನ್ಯಾಯಾಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿದೇನು.

ದಿನಾಂಕ:-08.06.2021 ರಂದು ಗುನ್ನೆ ನಂ:74/2021 ಕಲಂ:364 ಐಪಿಸಿ ಪ್ರಕರಣದಲ್ಲಿ ತನಿಖೆಗೆ ಇಬ್ಬರು ಸಿಬ್ಬಂದಿಯವರನ್ನು ಪಂಚರಾಗಿ ನೇಮಿಸಿಕೊಡಲು ಮನವಿ ಪತ್ರವನ್ನು ಮಾನ್ಯ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಳ್ಳಾರಿರವರಲ್ಲಿ ಕಳುಹಿಸಿದೇನು ಮತ್ತು ಚಾ ಸಾ 4 ಮತ್ತು 5 ರವರ ಪಂಚರಾಗಿ ನೇಮಕಾತಿ ಆದೇಶ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ:-08.06.2021 ರಂದು ಬೆಳಿಗ್ಗೆ 09.00 ಗಂಟೆಗೆ ಈ ಪ್ರಕರಣದಲ್ಲಿಯ ಆರೋಪಿ ಎ1 ಮಲ್ಲಯ್ಯ ರವರು ಈ ಕೇಸಿನ ಕೃತ್ಯಕ್ಕೆ ಬಳಿಸಿದ ಎಂ 2 ರೆಡ್ ಮೀ 4 ಜೀ ಮೊಬೈಲ್ ಫೋನ್ನ ಐ.ಇ.ಎಂ.ಐ ನಂ: 869155044932053 ಹಾಗೂ 869155044932061 ನೇದ್ದರ ಮೊಬೈಲ್ ಮತ್ತು ಅದರಲ್ಲಿ ಜಿಯೋ ಕಂಪನಿಯ ಸೀಮ್ ನಂ:-8618583115 ಮತ್ತು ಏರಟೇಲ್ ಕಂಪನಿಯ ಸೀಮ್ ನಂ:-8867462123 ನೇದ್ದನ್ನು ಮಹಿಳಾ ಪೊಲೀಸ್ ಠಾಣೆಯಲ್ಲಿ ಹಾಜರು ಪಡಿಸಿದ್ದನ್ನು ಪಂಚರಾದ ಚಾ ಸಾ 4 ಎ.ಶ್ರೀನಿವಾಸ ಮತ್ತು ಚಾ ಸಾ 5 ಹೊನ್ನೂರಪ್ಪ ರವರ ಸಮಕ್ಷಮ ಬೆಳಿಗ್ಗೆ 09.20 ರಿಂದ 10.00 ಗಂಟೆಯವರೆಗೆ ನಿಪಿ 70 ರಂತೆ ಪಂಚನಾಮೆ ಮಾಡಿ ನಿಪಿ 71 ರಂತೆ ಫೋಟೊ ತೆಗೆಸಲಾಯಿತು. ನಂತರ ಮು ಮಾ 2 ಮೊಬೈಲ್ ನ್ನು ಪಂಚನಾಮೆ ಮೂಲಕ ಸ್ವಾಧಿನಕ್ಕೆ ತೆಗೆದುಕೊಂಡು ಠಾಣೆಯ ಪಿ.ಎಫ್. ನಂ:-35/21 ರಲ್ಲಿ ನೊಂದಾಯಿಸಿಕೊಂಡು ಪರವಾನಿಗೆಗಾಗಿ ನ್ಯಾಯಾಲದಯಲ್ಲಿ ನಿವೇದಿಸಿಕೊಂಡಿರುತ್ತದೆ. ಸಾಕ್ಷಿ ನಿಪಿ 70 ರಲ್ಲಿಯ ತನ್ನ

ಸಹಿಯನ್ನು ನೋಡಿ ಸಾಕ್ಷಿ ಗುರ್ತಿಸಿದ್ದು ಅದನ್ನು ನಿಪಿ 70(ಸಿ) ಎಂದು ಮತ್ತು ಅದರಲ್ಲಿ ಆರೋಪಿ 1 ರ ಸಹಿಯನ್ನು ನಿಪಿ 70(ಡಿ) ಎಂದು ಗುರ್ತಿಸಲಾಯಿತು.

ಆರೊಪಿ-1 ಮಲ್ಲಯ್ಯ ರವರು ಈ ಕೇಸಿನಲ್ಲಿ ಮೃತರನ್ನು ಕೊಲೆ ಮಾಡುವ ಉದ್ದೇಶದಿಂದ ಅಪಹರಣ ಮಾಡಿದ ಕೃತ್ಯಸ್ಥಳವನ್ನು ತೋರಿಸಿದ್ದು ಸದರಿ ಸ್ಥಳದಲ್ಲಿ ನಮ್ಮೊಂದಿಗೆ ಇದ್ದ ಪಂಚರಾದ ಚಾ ಸಾ 4 ಎ.ಶ್ರೀನಿವಾಸ ಮತ್ತು ಚಾ ಸಾ 5 ಹೊನ್ನೂರಪ್ಪ ರವರ ಸಮಕ್ಷಮ ಬೆಳಿಗ್ಗೆ 10.40 ರಿಂದ 11.15 ಗಂಟೆಯವರೆಗೆ ನಿಪಿ 72 ರಂತೆ ಪಂಚನಾಮೆ ಯನ್ನು ಮಾಡಿದ್ದೆ. ಅದೇ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿದ್ದೆ. ನಿಪಿ 73 ರಂತೆ ಭಾವಚಿತ್ರ ಸಹ ತೆಗೆಸಿದ್ದೆ. ಸಾಕ್ಷಿ ನಿಪಿ 72 ರಲ್ಲಿಯ ತನ್ನ ಸಹಿ ಮತ್ತು 1 ನೇ ಆರೋಪಿ ಸಹಿ ನೋಡಿ ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 72(ಸಿ) ಮತ್ತು 72 (ಡಿ) ಎಂದು ಗುರ್ತಿಸಲಾಯಿತು. ಕಚ್ಚಾ ನಕಾಶೆಯನ್ನು ನಿಪಿ 121 ಎಂದು ಸಾಕ್ಷಿ ಮತ್ತು 1 ನೇ ಆರೋಪಿ ಸಹಿಗಳನ್ನು ನಿಪಿ 121(ಎ) ಮತ್ತು 121(ಬಿ) ಎಂದು ಗುರ್ತಿಸಲಾಯಿತು.

ಈ ಕೇಸಿನ ಆರೊಪಿ-1 ಮಲ್ಲಯ್ಯ ಮತ್ತು ಆರೋಪಿ-2 ಸೌರಪ್ಪ @ಸೂರಿ ರವರು ದಾಸಪುರ ಗ್ರಾಮದ ಮಹಾಕಾಳಿ ದೇವಸ್ಥಾನದ ಹತ್ತಿರ ಸಿಮೆಂಟ್ ಮೋರಿಯ ಬಳಿ ರಾಮಲಕ್ಷ್ಮೀ ಮತ್ತು ಜಯಮ್ಮರವರೊಂದಿಗೆ ಊಟ ಮಾಡಿದ ಸ್ಥಳವನ್ನು ತೋರಿಸುವುದಾಗಿ ತಿಳಿದ್ದರಿಂದ ಸಿಬ್ಬಂದಿಯವರಾದ ಸಿ.ಡಬ್ಲ್ಯೂ.45 ಶೆಕ್ಷವಲಿ ಎ.ಎಸ್.ಐ ಹೆಚ್.ಸಿ-212 ಪಿಸಿ-160 ಕಾಲುವೆಯಲ್ಲಿ ಇಳಿಯಲು ಪರಿಣಿತರಾದ ಹೆಚ್.ಜಿ-57 ಉಮೇಶ, ಎಹೆಚ್.ಸಿ 18 ನಾಗರಾಜ, ಎಹೆಚ್ಸಿ-85 ವಿ ಅಂಜಿನರೆಡ್ಡಿ ರವರೊಂದಿಗೆ ಇಲಾಖೆ ಜಿಪ್ ನಂ:7979 ನೇದ್ದರಲ್ಲಿ ಹಾಗೂ ಕಾರ್ ನಂ:-ಕೆಎ 25 ಎಂ.ಬಿ-1526 ಬೆಳಿಗ್ಗೆ 11.50 ಗಂಟೆಗೆ ಠಾಣೆ ಬಿಟ್ಟು 1 ನೇ ಆರೋಪಿತನು ತೋರಿಸಿದಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ಮದ್ಯಾಹ್ನ 12.40 ರಿಂದ 01.10 ಗಂಟೆಯವರೆಗೆ ಮತ್ತು ದಾಸಪುರ ಬಳಿ ಇರುವ ಕಾಲುವೇ ಬಳಿ ಮೃತರನ್ನು ಕೊಲೆ ಮಾಡಿದ ಸ್ಥಳದ ಪಂಚನಾಮೆಯನ್ನು ನಿಪಿ 74 ರಂತೆ ಮಾಡಿ ಕೃತ್ಯಕ್ಕೆ ಬಳಸಿದ ಸುಮಾರು 2 ಅಡಿ ಉದ್ದದ ಆಟೋ ಕಿಕ್ ಸ್ಟಾಟರ್ ಕಬ್ಬಿಣದ ರಾಡನ್ನು ಅಂದರೆ ಮು.ಮಾ. 1 ನ್ನು ಸ್ವಾಧಿನಕ್ಕೆ ತೆಗೆದುಕೊಂಡು ಪಂಚನಾಮೆಯನ್ನು ಮದ್ಯಾಹ್ನ 01.15 ರಿಂದ 02.40 ಗಂಟೆಯವರೆಗೆ

ಪಂಚಾರಾದ ಚಾ ಸಾ 4 ಎ.ಶ್ರೀನಿವಾಸ ಮತ್ತು ಚಾ ಸಾ 5 ಹೊನ್ನೂರಪ್ಪ ರವರ ಸಮಕ್ಷಮ ನಿಪಿ 74 ರಂತೆ ಮಾಡಿ, ನಿಪಿ 75 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ, ನಿಪಿ 76 ಮತ್ತು 77 ರಂತೆ ಭಾವಚಿತ್ರಗಳನ್ನು ತೆಗೆಸಿದ್ದೆ. ಸದರಿ ಪ್ರಕ್ರಿಯೆಯನ್ನು ಈಗ ನೋಡುತ್ತಿರುವ ನಿಪಿ 80 ವಿಡಿಯೋಸಿಡಿಯಲ್ಲಿರುವಂತೆ ಚಿತ್ರಿಕರಿಸಲಾಗಿರುತ್ತದೆ. ಸ್ವಾಧಿನಕ್ಕೆ ತೆಗೆದುಕೊಂಡ ಕೊಲೆ ಮಾಡಲು ಉಪಯೋಗಿಸಿದ ಎಂ 1 ರಾಡ್ ನ್ನು ಠಾಣೆಯ ಪಿ.ಎಫ್. ನಂ:36/2021 ರಲ್ಲಿ ನೊಂದಾಯಿಸಿಕೊಂಡು ಪರವಾನಿಗೆಗಾಗಿ ನ್ಯಾಯಾಲಯದಲ್ಲಿ ನಿವೇದಿಸಿಕೊಂಡಿರುತ್ತದೆ. ಸಾಕ್ಷಿ ನಿಪಿ 74 ರಲ್ಲಿಯ ತನ್ನ ಹಾಗೂ 1 ಮತ್ತು 2 ನೇ ಅರೋಪಿಗಳ ಸಹಿಯನ್ನು ನೋಡಿ ಗುರ್ತಿಸಿದ್ದನ್ನು ಕ್ರಮವಾಗಿ ಅವುಗಳನ್ನು ನಿಪಿ 74(ಸಿ), ನಿಪಿ-74(ಡಿ) ಮತ್ತು ನಿಪಿ- 74 (ಇ) ಎಂದು ಗುರ್ತಿಸಲಾಯಿತು. ನಿಪಿ 75 ರಲ್ಲಿಯ ಸಾಕ್ಷಿಯ ಹಾಗು 1 ಮತ್ತು 2 ನೇ ಆರೋಪಿ ಸಹಿಗಳನ್ನು ಕ್ರಮವಾಗಿ ನಿಪಿ 75(ಸಿ), ನಿಪಿ-75(ಡಿ) ಮತ್ತು 75(ಇ) ಎಂದು ಗುರ್ತಿಸಲಾಯಿತು.

ಜಯಮ್ಮ ಮತ್ತು ರಾಮಲಕ್ಷ್ಮೀಯನ್ನು ಆರೋಪಿತರು ಅಪಹರಣ ಮಾಡಲು ಉಪಯೋಗಿಸಿದ ನಿಪಿ 79 ಫೋಟೋದಲ್ಲಿನ ಕೆ.ಎ-20 ಎನ್. 7823 ಬಿಳಿ ಬಣ್ಣದ ಸ್ವಿಫ್ಟ್ ಡಿಜೈರ್ ಕಾರನ್ನು ಬಳ್ಳಾರಿ ಟಿ.ಬಿ ಸ್ಯಾನಿಟೋರಿಯಂ ಹತ್ತಿರ ಮಲ್ಲಯ್ಯ ಲೇಔಟ್ನ 01 ನೇ ಕ್ರಾಸ್ ಹತ್ತಿರ 1 ನೇ ಆರೋಪಿಯು ಹಾಜರು ಪಡಿಸಿದ್ದು ಪಂಚರರಾದ ಸಿ.ಡಬ್ಲ್ಯು.4 ಶ್ರೀನಿವಾಸ ಮತ್ತು ಚಾಸಾ.5 ಹೊನ್ನೂರಪ್ಪ ಹಾಗೂ ಸಿಬ್ಬಂದಿಯವರೊಂದಿಗೆ ಮದ್ಯಾಹ್ನ 03.35 ರಿಂದ 04.10 ಗಂಟೆಯವರೆಗೆ ನಿಪಿ 78 ರಂತೆ ಪಂಚನಾಮೆ ಮಾಡಿ ಸ್ವಾಧಿನಕ್ಕೆ ಪಡೆದುಕೊಂಡಿದ್ದೆ. ಈ ಕುರಿತು ನಿಪಿ 79 ರಂತೆ ಭಾವಚಿತ್ರ ತೆಗೆಯಲಾಯಿತು ಮತ್ತು ಸ್ವಾಧಿನಕ್ಕೆ ತೆಗೆದುಕೊಂಡ ಕಾರನ್ನು ಠಾಣೆಯ ಪಿ.ಎಫ್.ನಂ:37/2021 ರಲ್ಲಿ ನೊಂದಾಯಿಸಿ ಅನುಮತಿಗಾಗಿ ನ್ಯಾಯಾಲಯದಲ್ಲಿ ನಿವೇದಿಸಿಕೊಂಡಿರುತ್ತದೆ. ಸಾಕ್ಷಿ ನಿಪಿ.78 ರಲ್ಲಿಯ ತನ್ನ ಹಾಗೂ 01 ನೇ ಆರೋಪಿ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ78(ಬಿ) ಮತ್ತು ನಿಪಿ-78(ಸಿ) ಎಂದು ಗುರುತಿಸಲಾಯಿತು.

ದಿನಾಂಕ:-08.06.2021 ರಂದು ಫಿರ್ಯಾದಿ ಸಿ.ಡಬ್ಲ್ಯು.1 ಶ್ರಾವಣಿ ರವರ ಮರುಹೇಳಿಕೆಯನ್ನು ನಿಪಿ 15 ರಂತೆ ಪಡೆದಿದ್ದೆ.

ದಿನಾಂಕ:08.06.2021 ರಂದು ಫಿರ್ಯಾದಿ ಚಾಸಾ.1 ಶ್ರಾವಣಿರವರ ಗಂಡ ಚಾಸಾ.15 ಅನುಪ್ ಕುಮಾರ್ ರವರನ್ನು ವಿಚಾರಣೆ ಮಾಡಿದ್ದು ಅವರು ಪಿರ್ಯಾದಿಗನುಗುಣವಾಗಿ ಸಾಕ್ಷಿ ನುಡಿದಿದ್ದು ಹೇಳಿಕೆ ಪಡೆಯಲಾಯಿತು. ಅವರು ನನ್ನ ಮುಂದೆ ನಿಪಿ 51 ರಂತೆ ಹೇಳಿಕೆ ನೀಡಿರುತ್ತಾರೆ.

ಈ ಕೇಸಿನ ಕೃತ್ಯ ಸ್ಥಳಗಳ ಜಪ್ತು ಪಂಚನಾಮೆ ಕಾಲಕ್ಕೆ ಪೊಲೀಸ್ ಇಲಾಖೆ ವತಿಯಿಂದ ವಿತರಿಸಿದ ಸೋನಿ ಡಿಜಿಟಲ್ ವಿಡಿಯೋದಿಂದ ವಿಡಿಯೋ ಮಾಡಿ ದೃಶ್ಯಗಳನ್ನು ಸಿಡಿಯಲ್ಲಿ ಶೇಖರಣೆ ಮಾಡಿಕೊಟ್ಟ ಚಾಸಾ.47 ಅಂಜಿನಿರೆಡ್ಡಿ ಎ.ಹೆಚ್.ಸಿ-85 ರವರಿಂದ 65(ಬಿ) ಐ.ಇ. ಯಾಕ್ಟ್ 1872 ರಲ್ಲಿ ದೃಢಿಕರಣ ಪತ್ರವನ್ನು ನಿಪಿ.109 ರಂತೆ ಪಡೆದುಕೊಂಡಿರುತ್ತೇನೆ. ನಂತರ ಆರೋಪಿತರನ್ನು ರಿಮಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ಸಾಕ್ಷಿ ನಿಪಿ 109 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 109(ಬಿ) ಎಂದು ಗುರ್ತಿಸಲಾಯಿತು.

ಈ ಕೇಸಿನಲ್ಲಿಯ ಮೃತ ದೇಹಗಳನ್ನು ಪತ್ತೆಮಾಡಿ ಕೊಡಲು ಬಳ್ಳಾರಿ ಅಗ್ನಿ ಶಾಮಕ ದಳದವರಿಗೆ ದಿನಾಂಕ:-10.06.2021 ರಂದು ಮನವಿ ಪತ್ರ ಸಲ್ಲಿಸಿರುತ್ತೇನೆ. ಸದರಿ ಮನವಿ ಪತ್ರವನ್ನು ನಿಪಿ-122 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-122(ಎ) ಎಂದು ಗುರುತಿಸಲಾಯಿತು.

ಈ ಕೇಸಿನಲ್ಲಿಯ ಆರೋಪಿ-1 ಎನ್.ಅಗಸರ ಮಲ್ಲಯ್ಯ ಮತ್ತು ಆರೋಪಿ-2 ಸೌರಪ್ಪ@ಸೂರಿ ಇವರನ್ನು ತನಿಖೆಗಾಗಿ 10 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡುವಂತೆ ಕೋರಿ ಮಾನ್ಯ ನ್ಯಾಲಯಾಲಕ್ಕೆ ದಿನಾಂಕ:-09.06.2021 ರಂದು ಮನವಿ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ಮನವಿ ಪತ್ರ ನೋಡಿ ಗುರ್ತಿಸಿದ್ದು ಅದನ್ನು ನಿಪಿ 123 ಎಂದು, ಸಾಕ್ಷಿಯ ಸಹಿಯನ್ನು ನಿಪಿ 123(ಎ) ಎಂದು ಗುರ್ತಿಸಲಾಯಿತು.

ಈ ಕೇಸಿನಲ್ಲಿ ಮೃತ ಜಯಮ್ಮ ಮತ್ತು ಆರೋಪಿ-1 ಮಲ್ಲಯ್ಯ ರವರ ಮನೆಗಳ ಶೋಧನಾ ವಾರೆಂಟ್ ನೀಡುವಂತೆ ದಿನಾಂಕ:-09.06.2021 ರಂದು ಮಾನ್ಯ ನ್ಯಾಯಾಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ

ಮನವಿ ಪತ್ರ ನೋಡಿ ಗುರ್ತಿಸಿದ್ದು ಅದನ್ನು ನಿಪಿ 124 ಎಂದು ಸಾಕ್ಷಿ ಸಹಿಯನ್ನು 124(ಎ) ಎಂದು ಗುರ್ತಿಸಲಾಯಿತು.

ದಿನಾಂಕ:11.06.2021 ರಂದು ಈ ಕೇಸಿನ ರಾಮಲಕ್ಷ್ಮೀ ಮತ್ತು ಜಯಮ್ಮ ರವರ ಮೃತ ದೇಹವನ್ನು ಪತ್ತೆ ಮಾಡಿಕೊಂಡು ಬರಲು ಎಂ.ಶೆಕ್ಷವಲಿ ಎ.ಎಸ್.ಐ ಮತ್ತು ಮುಕ್ತಿಯಾರ್ ಅಹಮ್ಮದ್ ಹೆಚ್.ಸಿ-454 ವರಿಗೆ ಜ್ಞಾಪನ ನೀಡಿ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಸದರಿ ಜ್ಞಾಪನ ಪತ್ರ ನೋಡಿ ಗುರ್ತಿಸಿದ್ದು ಅದನ್ನು ನಿಪಿ 125 ಎಂದು, ಸಾಕ್ಷಿಯ ಸಹಿಯನ್ನು 125(ಎ) ಎಂದು ಗುರ್ತಿಸಲಾಯಿತು.

ಈ ಕೇಸಿನ ರಾಮಲಕ್ಷ್ಮೀ ಮತ್ತು ಜಯಮ್ಮ ರವರ ಮೃತ ದೇಹವನ್ನು ಪತ್ತೆ ಮಾಡಿಕೊಂಡು ಬರಲು ದಿನಾಂಕ:-11.06.2021 ರಂದು ಕರ್ನೂಲ್, ಆದೋನಿ, ಕೋಡುಮೂರು, ಹೊಳಗುಂದ ಕಡೆ ಹೋಗಿದ್ದ ಎಂ.ಶೆಕ್ಷವಲಿ ಎ.ಎಸ್.ಐ ಮತ್ತು ಮುಕ್ತಿಯಾರ್ ಅಹಮ್ಮದ್ ಹೆಚ್.ಸಿ-454 ಮೃತ ದೇಹದ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲವೆಂದು ದಿನಾಂಕ:12.06.2021 ರಂದು ವರದಿ ಮಾಡಿರುತ್ತಾರೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 126 ಎಂದು, ಸಾಕ್ಷಿಯ ಸಹಿಯನ್ನು 126(ಎ) ಎಂದು ಗುರ್ತಿಸಲಾಯಿತು.

ದಿನಾಂಕ:14.06.2021 ರಂದು ಈ ಕೇಸಿನ ರಾಮಲಕ್ಷ್ಮೀ ಮತ್ತು ಜಯಮ್ಮ ರವರ ಮೃತ ದೇಹವನ್ನು ಪತ್ತೆ ಮಾಡಿಕೊಂಡು ಬರಲು ಚಾಸಾ.45 ಎಂ.ಶೆಕ್ಷವಲಿ ಎ.ಎಸ್.ಐ ಮತ್ತು ಚಾಸಾ.46 ಮುಕ್ತಿಯಾರ್ ಅಹಮ್ಮದ್ ಹೆಚ್.ಸಿ-454 ವರಿಗೆ ಜ್ಞಾಪನ ನೀಡಿ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಜ್ಞಾಪನ ಪತ್ರವನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 127 ಎಂದು ಸಾಕ್ಷಿ ಸಹಿಯನ್ನು 127(ಎ) ಎಂದು ಗುರ್ತಿಸಲಾಯಿತು.

ಸಿರಿಗೇರಿಯ ದಾಸಪುರ ಗ್ರಾಮದ ಹತ್ತಿರ ಇರುವ 66 ಕಿ.ಮೀ ಎಲ್.ಎಲ್.ಸಿ ಕಾಲುವೆ ಪ್ರಾರಂಭದಿಂದ ಕೊನೆಯವರೆಗಿನ ಕಾಲುವೆ ನೀರಿನಲ್ಲಿ ಮೃತ ದೇಹಗಳು ಪತ್ತೆಯಾಗಿರುವ ಬಗ್ಗೆ ಅಧಿನ ಸಿಬ್ಬಂದಿಯಿಂದ ಮಾಹಿತಿ ಒದಗಿಸಲು ಹಾಗೂ ಕಾಲುವೆಯಲ್ಲಿ ಯಾವ ತಿಂಗಳು, ಯಾವ ದಿನಾಂಕದವರೆಗೆ ನೀರು ಇದೆ, ಯಾವ ದಿಕ್ಕಿನ ಕಡೆ ಎಷ್ಟು ಆಳದಲ್ಲಿ ಹರಿಯುತ್ತಿದೆ ಮತ್ತು ಎಷ್ಟು ರಭಸವಾಗಿ

ಹರಿಯುತ್ತಿದೆ ಎಂದು ಮಾಹಿತಿ ಒದಗಿಸಲು ದಿನಾಂಕ:-14.06.2021 ರಂದು ಎ.ಇ.ಇ ತುಂಗಭದ್ರ ಡ್ಯಾಂ ಎಲ್.ಎಲ್.ಸಿ ವಿಭಾಗದವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ಮನವಿ ಪತ್ರವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 128 ಎಂದು, ಸಾಕ್ಷಿಯ  ಸಹಿಯನ್ನು 128(ಎ) ಎಂದು ಗುರ್ತಿಸಲಾಯಿತು.

ಈ ಕೇಸಿನ ತನಿಖೆಗಾಗಿ ಮಿನಿ ವ್ಯಾನ್ ಮತ್ತು ಪೋಟೋ ಗ್ರಾಫರ್, ವಿಡಿಯೋ ಗ್ರಾಫರ್ ರವರನ್ನು ದಿನಾಂಕ:-15.06.2021 ರಂದು ನನ್ನ ಬಳಿ ವರದಿ ಮಾಡಿಕೊಳ್ಳುವಂತೆ ನಿಯೋಜನೆ ಮಾಡಿ ಕಳುಹಿಸಿ ಕೊಡಲು ಡಿ.ಎಸ್.ಪಿ ಡಿ.ಎ.ಆರ್ ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ಪತ್ರವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 129 ಎಂದು, ಸಾಕ್ಷಿಯ ಸಹಿಯನ್ನು 129(ಎ) ಎಂದು ಗುರ್ತಿಸಲಾಯಿತು.

ಈ ಕೇಸಿನ ಕೃತ್ಯ ಸ್ಥಳದ ಪಂಚನಾಮೆ ವೇಳೆ ಪಂಚರಾಗಿ ಹಾಜರಿರಲು ಅಧಿನ ಕರ್ತವ್ಯ ನಿರ್ವಹಿಸುವ  ಇಬ್ಬರು ಸಿಬ್ಬಂದಿಯವರನ್ನು ನಿಯೋಜನೆ ಮಾಡಿ ನನ್ನ ಬಳಿ ದಿನಾಂಕ:-15.06.2021 ರಂದು ಬೆಳಿಗ್ಗೆ 08.00 ಗಂಟೆಗೆ ನನ್ನ ಮುಂದೆ ವರದಿ ಮಾಡುವಂತೆ ಕಳುಹಿಸಿಕೊಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪೂರ್ವವಲಯ ಬಳ್ಳಾರಿ ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 130 ಎಂದು, ಸಾಕ್ಷಿಯ ಸಹಿಯನ್ನು 130(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ದಿನಾಂಕ: 08.06.2021 ರಂದು ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರಿಗೆ ಪಂಚರನ್ನು ಕಳುಹಿಸಿಕೊಡಲು ಕೋರಿದ ಪತ್ರವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 131 ಎಂದು, ಸಾಕ್ಷಿಯ ಸಹಿಯನ್ನು 131(ಎ) ಎಂದು ಗುರ್ತಿಸಲಾಯಿತು. ಪಂಚರ ನೇಮಕ ಆದೇಶವನ್ನು ನಿಪಿ.132 ಎಂದು ಗುರ್ತಿಸಲಾಯಿತು.

ದಿನಾಂಕ:-15.06.2021 ರಂದು ಆರೋಪಿ ಅಗಸರ ಮಲ್ಲಯ್ಯ ಮತ್ತು ಸೌರಪ್ಪ@ಸೂರಿ ಇತನನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ಠಾಣೆಗೆ ಬಂದಿರುತ್ತೇನೆ. ನಂತರ ಅವರುಗಳ ಮರು ಸ್ವಖುಷಿ ಹೇಳಿಕೆ ಪಡೆದುಕೊಂಡಿದ್ದೆ. 1 ನೇ ಆರೋಪಿಯು

ತನ್ನ ಮರು ಸ್ವಖುಷಿ ಹೇಳಿಕೆಯಲ್ಲಿ ಜಯಮ್ಮ ಮತ್ತು ರಾಮಲಕ್ಷ್ಮೀ ಯನ್ನು ಕೊಲೆ ಮಾಡಿ ಅವರ ಮೈಮೇಲೆ ಇದ್ದ ಬಂಗಾರದ ಸರಗಳನ್ನು ತೆಗೆದುಕೊಂಡು ಅವುಗಳನ್ನು ಫೆಡರಲ್ ಬ್ಯಾಂಕ್, ಬಳ್ಳಾರಿಯಲ್ಲಿ ಚಾಸಾ 24 ರವರ ಮೂಲಕ ಒತ್ತೆ ಇಟ್ಟಿದ್ದಾಗಿ ಹೇಳಿರುತ್ತಾನೆ. ಸಾಕ್ಷಿಯು 1ನೇ ಆರೋಪಿ ಮರು ಸ್ವ ಹೇಳಿಕೆ ನೋಡಿ ಗುರ್ತಿಸಿದ್ದು ಅದನ್ನು ನಿಪಿ 133 ಎಂದು, ಸಾಕ್ಷಿಯ ಸಹಿಯನ್ನು ಮತ್ತು ಆರೋಪಿ ಸಹಿಯನ್ನು ನಿಪಿ 133(ಎ) ಮತ್ತು ನಿಪಿ-133(ಬಿ) ಎಂದು ಗುರ್ತಿಸಲಾಯಿತು.

ಆರೋಪಿ ಮಲ್ಲಯ್ಯ ಮತ್ತು ಸೌರಪ್ ರವರು ನೀಡಿದ ಮರು ಸ್ವಖುಷಿ ಹೇಳಿಕೆ ಮೇರೆಗೆ ಆರೋಪಿ-3 ನಾಗರಾಜ ಮತ್ತು ಆರೋಪ-4 ರಾಮಂಜನಿ ರವರನ್ನು ಪತ್ತೆ ಮಾಡಿಕೊಂಡು ಬರಲು ಬಸಪ್ಪ ಪಿಸಿ-115 ಮತ್ತು ಮುಕ್ತಿಯಾರ್ ಅಹಮ್ಮದ್ ಹೆಚ್.ಸಿ-454 ರವರನ್ನು ದಿನಾಂಕ:-15.06.2021 ರಂದು ನೇಮಿಸಿ ಕಳುಹಿಸಿ ಕೊಟ್ಟಿರುತ್ತೇನೆ.

ದಿನಾಂಕ:-15.06.2021 ರಂದು ಬಸಪ್ಪ ಪಿಸಿ-115 ಮತ್ತು ಮುಕ್ತಿಯಾರ್ ಅಹಮ್ಮದ್ ಹೆಚ್.ಸಿ-454 ರವರು ಸೇರಿ ಈ ಕೇಸಿನ ಆರೋಪಿ -3 ನಾಗರಾಜ ಮತ್ತು ಆರೋಪಿ-4 ರಾಮಂಜನಿ ರವರನ್ನು ದಿನಾಂಕ:-15.06.201 ರಂದು ಬೆಳಿಗ್ಗೆ 10.00 ಗಂಟೆಗೆ ಠಾಣೆಗೆ ಕೆ.ಎ-34 ಎ-2957 ನೇದ್ದರ ಆಟೋ ರಿಕ್ಷಾ ದೊಂದಿಗೆ ಕರೆದುಕೊಂಡು ಬಂದು ಹಾಜರು ಪಡಿಸಿ ವರದಿ ಮಾಡಿಕೊಂಡಿರುತ್ತಾರೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 134 ಎಂದು, ಸಾಕ್ಷಿಯ ಸಹಿಯನ್ನು 134 (ಎ) ಎಂದು ಗುರ್ತಿಸಲಾಯಿತು.

ದಿನಾಂಕ:-15.06.2021 ರಂದು ಆರೋಪಿ-3 ನಾಗರಾಜ ಮತ್ತು ಆರೋಪಿ-4 ರಾಮಂಜನಿ ರವರ ವಿಚಾರಣೆ ಮಾಡಿ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತದೆ. ಇವರು ಆರೋಪಿ-1 ಮತ್ತು 2 ರವರ ಮರು ಸ್ವಖುಷಿ ಹೇಳಿಕೆಗನುಗುಣವಾಗಿ ನುಡಿದಿರುತ್ತಾರೆ.

ದಿನಾಂಕ:-15.06.2021 ರಂದು ಆರೋಪಿ 3 ನಾಗರಾಜ ಹಾಜರು ಪಡಿಸಿದ ಒಪ್ಪೋ ಎಫ್ 15 4ಜಿ ಡ್ವಯಲ್ ಸೀಮ್ ಐ.ಎಂ.ಇ.ಐ ನಂ:- 863115044737254 ಮತ್ತು 863115044737247 ಸ್ಲಾಟ್ಗಳ ಪೈಕಿ ಸ್ಲಾಟ್ ಒಂದರಲ್ಲಿ ಏರಟೇಲ್ ಸೀಮ್ ನಂ:-9618430804 ನೇದ್ದರ ಸೀಮ್ ಮತ್ತು

ಮೊಬೈಲ್ ಫೋನ್ನ್ನು ಹಾಗೂ ಆರೋಪಿ 4 ರಾಮಂಜನಿ ಬಳಸುತ್ತಿದ್ದ ಒಪ್ಪೋ ಎಜಿವಿ-7 ಜೆ ಡ್ವಯಲ್ ಸೀಮ್ ಮೊಬೈಲ್ ಐ.ಎಂ.ಇ.ಐ ನಂ:- 86593104343369 ಮತ್ತು 865931043433689 ನೇದ್ದರ ಪೈಕಿಸ್ಲಾಟ್ ಒಂದರಲ್ಲಿದ್ದ ಏರಟೇಲ್ ಸಿಮ್ ನಂ:-9036644393 ಸೀಮ್ ಸಮೇತ ಹಾಗೂ ಕೃತ್ಯಕ್ಕೆ ಬಳಿಸಿದ ಕಪ್ಪು ಮತ್ತು ಹಳದಿ ಬಣ್ಣದ ಬಜಾಜ್ ಕಂಪನಿಯ ಕೆ.ಎ-34 ಎ-2957 ಆಟೋ ರಿಕ್ಷಾ ಬೆಲೆ 28,000/- ಬಾಳುವುದನ್ನು ಪಂಚರಾದ ಚಾಸಾ 6 ಡಿ.ಎಂ ರವಿಶಂಕರ್ ಮತ್ತು ಚಾ ಸಾ 7 ಡಿ.ಮಹಮ್ಮದ್ ರವರ ಸಮಕ್ಷಮ ಬೆಳಿಗ್ಗೆ 11.35 ಗಂಟೆಯಿಂದ ಮದ್ಯಾಹ್ನ 12.20 ಗಂಟೆಯವರೆಗೆ ಠಾಣೆಯಲ್ಲಿ ನಿಪಿ 81 ರಂತೆ ಪಂಚನಾಮೆ ಮಾಡಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದೆ. ಈ ಕುರಿತು ಭಾವ ಚಿತ್ರಗಳನ್ನು ನಿಪಿ 82 ರಿಂದ 85 ರಂತೆ ತೆಗೆಸಿದ್ದೆ. ಹಾಗೂ ಜಪ್ತು ಪಡಿಸಿ ಈ ಎರಡು ಮೊಬೈಲ್ ಫೋನುಗಳನ್ನು ಮತ್ತು ಆಟೋ ರೀಕ್ಷಾವನ್ನು ಠಾಣೆಯ ಪಿ.ಎಫ್ ನಂ:-38/2021 ರಲ್ಲಿ ನೊಂದಾಯಿಸಿ ಪರವಾನಿಗೆಗಾಗಿ ಮಾನ್ಯ ನ್ಯಾಯಾಲಯದಲ್ಲಿ ನಿವೇದಿಸಿಕೊಂಡಿರುತ್ತದೆ. ನಿಪಿ-81 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-81(ಬಿ) ಎಂದು ಗುರುತಿಸಲಾಯಿತು. ಮು ಮಾ 2 ಮತ್ತು 3 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದರಿಂದ ಅವುಗಳನ್ನು ಮು ಮಾ 2 (ಎ) ಮತ್ತು ಮು ಮಾ 3(ಎ) ಎಂದು ಗುರುತಿಸಲಾಯಿತು.

ಜಯಮ್ಮ ಮತ್ತು ರಾಮಲಕ್ಷ್ಮೀ ರವರನ್ನು ಕೊಲೆ ಮಾಡಲು ಪ್ಲಾನ್ ಮಾಡಿದ ಸ್ಥಳಗಳನ್ನು ಆರೋಪಿತರಾದ ಎ-1 ಅಗಸರ ಮಲ್ಲಯ್ಯ,ಎ-2 ಸೌರಪ್ಪ@ಸೂರಿ, ಎ 3-ನಾಗರಾಜ, ಎ-4 ರಾಮಂಜನಿಯರವರು ಅನುಕ್ರಮವಾಗಿ ತೋರಿಸುವುದಾಗಿ ತಿಳಿಸಿದ್ದರಿಂದ ಪಂಚರಾದ ಚಾಸಾ 6 ರವಿಶಂಕರ್ ಮತ್ತು ಚಾಸಾ 7 ಮಹಮ್ಮದ್ ಹಾಗೂ ಫೋಟೋ ಗ್ರಾಫರ್, ವಿಡಿಯೋ ಗ್ರಾಫರ್ ಮತ್ತು ಸಿಬ್ಬಂದಿ ರವರು ಸೇರಿ ದಿನಾಂಕ:-15.06.2021 ರಂದು ಠಾಣೆಯಿಂದ ಸರಕಾರಿ ಜೀಪ್ನಲ್ಲಿ ಮದ್ಯಾಹ್ನ 12.30 ಗಂಟೆಗೆ ಹೊರಟು ಆರೋಪಿತರು ಬಳ್ಳಾರಿ ನಗರದ ಕುವೆಂಪು 03 ನೇ ಕ್ರಾಸ್ ಬಳಿ ಇರುವ ಹೆಚ್.ಎಲ್.ಸಿ ಕಾಲುವೆ ಬಳಿ ತೊರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ನಿಪಿ 86 ರಂತೆ ಮದ್ಯಾಹ್ನ 12.50 ಗಂಟೆಯಿಂದ 01.20 ಗಂಟೆಯವರೆಗೆ ಮಾಡಿದ್ದೆ. ನಿಪಿ-86 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-86(ಸಿ) ಎಂದು ಗುರುತಿಸಲಾಯಿತು.

ನಂತರ ಆರೋಪಿತರು ತೋರಿಸಿದ ಆಂದ್ರ ಪ್ರದೇಶ ಕರ್ನೂಲ್ ಜಿಲ್ಲೆಯ ಆಲೂರು ತಾಲೂಕಿನ ಗಟ್ಟು ಮಲ್ಲಯ್ಯ ದೇವಸ್ಥಾನದ ಗುಡ್ಡದಲ್ಲಿ ನೇರಣಿಕಿ ಮತ್ತು ಕೊತ್ತಪೇಟೆ ರಸ್ತೆಯಲ್ಲಿರುವ ಕೊಲ್ಲುಬಂಡೆ ಹತ್ತಿರ ಇದ್ದ ಸ್ಥಳದಲ್ಲಿ ಪಂಚನಾಮೆಯನ್ನು ನಿಪಿ.87 ರಂತೆ ಮದ್ಯಾಹ್ನ 03.00 ಗಂಟೆಯಿಂದ 03.45 ಗಂಟೆಯ ವರೆಗೆ ಮಾಡಿದ್ದೆ.

ನಂತರ ಸಿರುಗುಪ್ಪ ತಾಲೂಕಿನ ದಾಸಪುರ ಗ್ರಾಮದ ಎಲ್.ಎಲ್.ಸಿ ಕಾಲುವೆ ಹತ್ತಿರ ಆರೋಪಿತರು ತೋರಿಸಿದ ಸ್ಥಳದಲ್ಲಿ ಆ ದಿನ ಸಂಜೆ 05.00 ರಿಂದ 05.45 ಯವರೆಗೆ ನಿಪಿ 90 ರಂತೆ ಪಂಚನಾಮೆಯನ್ನು ಮಾಡಿದ್ದೆ.

ನಂತರ ಠಾಣೆಗೆ ಬಂದು ಆರೋಪಿ 3 ಮತ್ತು 4 ರವರನ್ನು ಸಿಬ್ಬಂದಿಯವರ ಸೂಕ್ತ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ನಿಪಿ 86, 87 ಮತ್ತು 90 ರಲ್ಲಿ ಸಾಕ್ಷಿಯ ಹಾಗೂ ಆರೋಪಿತರ ಸಹಿಗಳನ್ನು ಸಾಕ್ಷಿಯು ನೋಡಿ ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ 86(ಸಿ) ರಿಂದ 86(ಜಿ), 87(ಸಿ) ರಿಂದ 87(ಜಿ), 90(ಸಿ) ರಿಂದ 90(ಜಿ) ಎಂದು ಗುರ್ತಿಸಿಲಾಯಿತು. ನಿಪಿ 88, 89, 91, 92 ಫೋಟೋಗಳನ್ನು ಮತ್ತು ವಿಡಿಯೋ ಸಿಡಿ ನಿಪಿ 99, 100 ನ್ನು ಸಾಕ್ಷಿ ನೋಡಿ ಗುರ್ತಿಸುತ್ತಾರೆ. ಮತ್ತು ಅವುಗಳನ್ನು ಪಂಚನಾಮೆ ಸಮಯದಲ್ಲಿ ಮಾಡಿಕೊಂಡಿದ್ದಾಗಿ ಹೇಳಿರುತ್ತಾರೆ.

ದಿನಾಂಕ:-15.06.2021 ರಂದು ಸಾಕ್ಷಿದಾರರಾದ ಚಾಸಾ 16 ರುದ್ರಪ್ಪ, ಚಾಸಾ 17 ಹನುಂತಪ್ಪ, ಚಾಸಾ 18 ಇಸ್ಮಾಯಿಲ್, ಚಾಸಾ 19 ಷಮಿವುಲ್ಲಾ, ರವರಿಗೆ ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತದೆ. ಚಾಸಾ 16 ನಿಪಿ 21 ರಂತೆ, ಚಾಸಾ 17 ನಿಪಿ 24 ರಂತೆ, ಚಾಸಾ 18 ನಿಪಿ 26 ರಂತೆ, ಚಾಸಾ 19 ನಿಪಿ 41 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

ದಿನಾಂಕ:-15.06.2021 ರಂದು ಚಾಸಾ 21 ವೆಂಕಟೇಶ ಮತ್ತು ಚಾಸಾ 22 ಕುಮಾರ್ ರವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅವರು ನನ್ನ ಮುಂದೆ ನಿಪಿ 32 ಮತ್ತು 35 ರಂತೆ ಮರು ಹೇಳಿಕೆ ನೀಡಿರುತ್ತಾರೆ.

ದಿನಾಂಕ:-15.06.2021 ರಂದು ಚಾ ಸಾ 45 ಎ.ಎಸ್.ಐ ಶೆಕ್ಷವಲಿ ಮತ್ತು ಚಾ ಸಾ 46 ಮುಕ್ತಯಾರ್ ಹೆಚ್.ಸಿ-454 ರವರು ಠಾಣೆಗೆ ಬಂದು 14.06.201 ರಂದು

ತಾವು ಈ ಕೇಸಿನ ಮೃತ ದೇಹವನ್ನು ಪತ್ತೆ ಮಾಡಿಕೊಂಡು ಬರಲು ಹೋಗಿ ಅಗ್ನಿ ಷಾಮಕ ದಳದವರ ಸಹಾಯದಿಂದ ಕಾಲುವೆ ನೀರನ್ನು ಪರಿಶೀಲಿಸಿ ನೋಡಲಾಗಿ ಹಾಗೂ ಆದೋನಿ, ಆಸ್ಪರಿ, ಆಲೂರು, ಠಾಣೆಗೆ ಹೋಗಿ ಅನಾಮಧೇಯ ಮೃತ ಹೆಂಗಸರ ದೇಹಗಳಿಗೆ ತಾಳೆ ಮಾಡಿಸಿ ನೋಡಲಾಗಿ ಪತ್ತೆ ಆಗಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 135 ಎಂದು, ಸಾಕ್ಷಿಯ ಸಹಿಯನ್ನು 135(ಎ) ಎಂದು ಗುರುತಿಸಲಾಯಿತು.

ಪೊಲೀಸ್ ಕಸ್ಟಡಿಯಲ್ಲಿರುವ ಆರೋಪಿ-1 ಮತ್ತು ಆರೊಪಿ-2 ರವರನ್ನು ಸೂಕ್ತ ಬೆಂಗಾವಲಿನೊಂದಿಗೆ ಠಾಣೆಯಲ್ಲಿ ಇರಿಸಿಕೊಂಡಿದ್ದೆ.

ದಿನಾಂಕ:-16.06.2021 ರಂದು 1 ನೇ ಆರೋಪಿ ಮಲ್ಲಯ್ಯ ಈತನು ನನ್ನನ್ನು ಕರೆದುಕೊಂಡು ಹೋದರೆ ತಾನು ಹೊಸಪೇಟೆಯ ಸಿದ್ದಿ ಕಲ್ಯಾಣ ಮಂಟಪದ ಹತ್ತಿರ ನಾಗರಾಜನಿಗೆ 10,000/- ರೂಗಳನ್ನು ಕೊಟ್ಟ ಸ್ಥಳ, ಸಿದ್ದಿ ಪ್ರಿಯಾ ಕಲ್ಯಾಣ ಮಂಟಪ ಮತ್ತು ಆ ದಿವಸ ನಾನು ಹಾಗೂ ಜಯಮ್ಮ ಮತ್ತು ರಾಮಲಕ್ಷ್ಮೀ ಉಳಿದುಕೊಂಡ ಹೊಸಪೇಟೆಯ ನದಾಫ್ ಲಾಡ್ಜ್ ತೋರಿಸುವುದಾಗಿ ತಿಳಿಸಿದ ಮೇರೆಗೆ ಠಾಣೆಯಿಂದ ಪಂಚರಾದ ಚಾ ಸಾ 6 ಡಿ.ಎಂ ರವಿಶಂಕರ್, ಚಾ ಸಾ 7 ಡಿ ಮಹಮ್ಮದ್ ಮತ್ತು ಸಿಬ್ಬಂದಿಯವರನ್ನು ಕರೆದುಕೊಂಡು ಕೆ.ಎ-34 ಜಿ-0797 ರಲ್ಲಿ ಆರೋಪಿ ಮಲ್ಲಯ್ಯರವರನ್ನು ಕರೆದುಕೊಂಡು ಬೆಳಿಗ್ಗೆ 08.00 ಗಂಟೆಗೆ ಠಾಣೆ ಬಿಟ್ಟು ಬೆಳಿಗ್ಗೆ 09.45 ಗಂಟೆಗೆ ಸದರಿ ಸ್ಥಳಕ್ಕೆ ಹೋಗಿದ್ದೆ. ಅಲ್ಲಿ 1 ನೇ ಆರೋಪಿಯು ತಾನು 3 ನೇ ಆರೋಪಿ ನಾಗರಾಜನಿಗೆ ಖರ್ಚಿಗಾಗಿ 10,000/- ರೂಗಳನ್ನು ಇದೆ ಸ್ಥಳದಲ್ಲಿ ಕೊಟ್ಟಿದ್ದು ಅಂತ ಹೇಳಿ ತೋರಿಸಿದ್ದರಿಂದ ಸದರಿ ಸ್ಥಳದಲ್ಲಿ ವಿವರವಾದ ಪಂಚನಾಮೆಯನ್ನು ಬೆಳಿಗ್ಗೆ 09.45 ಗಂಟೆಯಿಂದ 10.30 ಗಂಟೆ ವರೆಗೆ ನಿ ಪಿ 93 ರಂತೆ ಮಾಡಿದ್ದೆ. ನಿ ಪಿ 94 ಮತ್ತು 95 ರಂತೆ ಭಾವಚಿತ್ರ ತೆಗೆಸಿದ್ದೆ.

1 ನೇ ಆರೋಪಿ ತೋರಿಸಿದ ಆರೋಪಿ ಮೃತರನ್ನು ದಿನಾಂಕ:-20.03.2021 ರಂದು ಹೊಸಪೇಟೆ ನದಾಪ್ ಲಾಡ್ಜ್ ನಲ್ಲಿ ಇರಿಸಿದ್ದಾಗಿ ಹೇಳಿ ತೋರಿಸಿದ ಸ್ಥಳದಲ್ಲಿ ನಿ ಪಿ 37 ರಂತೆ ಪಂಚನಾಮೆ ಮಾಡಿದ್ದೆ ಮತ್ತು ನಿ ಪಿ 99 ರಂತೆ

ವೀಡಿಯೋ ಚಿತ್ರೀಕರಣ ಮಾಡಿಕೊಂಡಿದ್ದೆ ಮತ್ತು ನಿ ಪಿ 38 ರಂತೆ ಭಾವ ಚಿತ್ರವನ್ನು ತೆಗೆಸಿದ್ದೆ. ನಂತರ ಲಾಡ್ಜ್ ನ ನೊಂದಣಿ ಪತ್ರ, ಅರೈವಲ್ ರಿಜಿಸ್ಟರ್ ಮತ್ತು ಮಲ್ಲಯ್ಯರವರ ಆಧಾರ್ ಕಾರ್ಡ್ ಜಿರಾಕ್ಸ ಪ್ರತಿಯನ್ನು ಲಾಡ್ಜ್ ಮಾಲಕರಿಂದ ಪಡೆದುಕೊಂಡು ಜಪ್ತು ಪಡಿಸಿಕೊಂಡಿರುತ್ತೇವೆ. ನಂತರ ಠಾಣೆಗೆ ಬಂದು ಇವುಗಳನ್ನು ಠಾಣೆಯ ಪಿ.ಎಫ್. ನಂ:-38 ಎ/2021 ರಲ್ಲಿ ಅಳವಡಿಸಿಕೊಂಡಿರುತ್ತೇವೆ. ಸಾಕ್ಷಿಯು ನಿ ಪಿ 93 ರಲ್ಲಿ ತನ್ನ ಹಾಗೂ 1 ನೇ ಆರೋಪಿಯನ್ನು ಗುರ್ತಿಸಿದ್ದು ಅವುಗಳನ್ನು ನಿ ಪಿ 93(ಸಿ) ಮತ್ತು 93(ಡಿ) ಎಂದು ಗುರ್ತಿಸಲಾಯಿತು. ಅದೆ ರೀತಿ ಸಾಕ್ಷಿಯು ನಿ ಪಿ 37 ರಲ್ಲಿ ತನ್ನ ಹಾಗೂ 1 ನೇ ಆರೋಪಿ ಸಹಿಯನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ನಿ ಪಿ 37(ಡಿ) ಮತ್ತು 37 (ಇ) ಎಂದು ಗುರ್ತಿಸಿಲಾಯಿತು. ಲಾಡ್ಜ್‌ನಲ್ಲಿ ಜಪ್ತು ಮಾಡಿಕೊಂಡ ಕಾಗದ ಪತ್ರಗಳನ್ನು ಸಾಕ್ಷಿ ನೋಡಿ ಗುರ್ತಿಸಿರುತ್ತಾರೆ. ಸದರಿ ದಾಖಲೆಗಳು ಜಿರಾಕ್ಸ್ ಪ್ರತಿ ಇರುವುದರಿಂದ ಅವುಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿಲ್ಲ.

ದಿನಾಂಕ:-20.03.2021 ರಂದು 1 ನೇ ಆರೋಪಿ ಮಲ್ಲಯ್ಯನು ಜಯಮ್ಮ ಮತ್ತು ರಾಮಲಕ್ಷ್ಮೀ ರವರನ್ನು ಕೊಲೆ ಮಾಡಿ ಜಯಮ್ಮಳ ಕೊರಳಿನಿಂದ ತೆಗೆದುಕೊಂಡಿದ್ದ ಬಂಗಾರದ ಎರಡು ಸರಗಳನ್ನು ತನ್ನ ಸಂಬಂಧಿ ಚಾ ಸಾ 24 ಅಂಬರೇಶ ಮೂಲಕ ಬಳ್ಳಾರಿಯ ಫೆಡ್ ಬ್ಯಾಂಕ್‌ನಲ್ಲಿ ಒತ್ತೆ ಇಟ್ಟಿದ್ದುತನ್ನನ್ನು ಕರೆದುಕೊಂಡು ಹೊದಲ್ಲಿ ತೋರಿಸುವುದಾಗಿ ತಿಳಿಸಿದ ಮೇರೆಗೆ ಸಾಕ್ಷಿದಾರರಾದ ಚಾ ಸಾ 24 ಅಂಬರೇಶ, ಹಾಗೂ ಪಿರ್ಯಾದುದಾರರಾದ ಚಾ ಸಾ 1 ಶ್ರಾವಣಿರವರೊಂದಿಗೆ 1 ನೇ ಆರೋಪಿ ತೋರಿಸಿದ ಸದರಿ ಬ್ಯಾಂಕ್ ಗೆ ಹೊಗಿ 1 ನೇ ಆರೋಪಿ ಮಲ್ಲಯ್ಯ ರವರು ಕೊಟ್ಟ ಒತ್ತೆಯಿಟ್ಟದ್ದ ಸರಗಳನ್ನು ಬ್ಯಾಂಕ್ ಮ್ಯಾನೇಜರ್ ಚಾ ಸಾ 34 ವಸಂತ ಕುಮಾರ್ ರವರು ಹಾಜರು ಪಡಿಸಿದ್ದನ್ನು ಪಿರ್ಯಾದಿ ಚಾ ಸಾ 1 ಶ್ರಾವಣಿ ರವರು ನೋಡಿ ಗುರುತಿಸಿದರು. ಮುಂದಿನ ಆದೇಶ ಪಡೆದು ಸರಳಗನ್ನು ಕೊಡುವುದಾಗಿ ಚಾ ಸಾ 34 ಮ್ಯಾನೇಜರ್ ರವರು ತಮ್ಮ ಸ್ವಾಧಿನದಲ್ಲಿ ಇಟ್ಟುಕೊಂಡರು. ಈ ಕುರಿತು ದಿನಾಂಕ:-16.06.2021 ರಂದು ಮದ್ಯಾಹ್ನ 03.15 ರಿಂದ 04.15 ಗಂಟೆಯವರೆಗೆ ನಿಪಿ 8 ರಂತೆ ಪಂಚನಾಮೆಯನ್ನು ಮಾಡಿದ್ದೆ. ನಿ ಪಿ 9 ಮತ್ತು ನಿ ಪಿ 9 ಎ ಅಂತೆ ಭಾವಚಿತ್ರವನ್ನು ತೆಗೆಸಲಾಯಿತು. ಹಾಗೂ ನಿ ಪಿ 97 ರಂತೆ ವಿಡಿಯೋ ಚಿತ್ರಿಕರಣ

ಮಾಡಲಾಯಿತು. ಸಾಕ್ಷಿ ನಿ ಪಿ 8 ರಲ್ಲಿ ತನ್ನ ಹಾಗೂ ಚಾ ಸಾ 24 ರ ಸಹಿ ನೋಡಿ ಗುರ್ತಿಸಿದ್ದು, ಸಾಕ್ಷಿ ಸಹಿಯನ್ನು ನಿ ಪಿ 8(ಎಫ್) ಎಂದು ಗುರ್ತಿಸಲಾಯಿತು. ಚಾಸಾ 24 ರವರ ಸಹಿಯನ್ನು ಈಗಾಗಲೇ ನಿಪಿ-8(ಬಿ) ಎಂದು ಗುರುತಿಸಲಾಗಿದೆ.

ನ್ಯಾಯಾಲಯದ ಶೋಧನಾ ವಾರೆಂಟ್ ಆದೇಶದಂತೆ ದಿನಾಂಕ:-16.06.2021 ರಂದು ಪಂಚರು ಮತ್ತು ಸಿಬ್ಬಂದಿಯವರು ಸೇರಿ ಪೊಲೀಸ್ ಠಾಣೆಯಿಂದ ಹೊರಟು ಬಳ್ಳಾರಿ ನಗರದ ಬೆಳಗಲ್ ರಸ್ತೆ ನಾಗಪ್ಪ ಕಟ್ಟೆ ಹತ್ತಿರ ಸಿ.ಎಂ.ಸಿ ಕಾಲೋನಿಯಲ್ಲಿರುವ 1 ನೇ ಆರೋಪಿ ಮಲ್ಲಯ್ಯನ ಮನೆಗೆ ಹೋಗಿ ಅವರ ಹೆಂಡತಿ ಚಾ ಸಾ 37 ಹೇಮಲತಾ ರವರಿಗೆ ಕೂಗಿ ಕರೆದು ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಮನೆ ಶೋಧನೆ ಮಾಡಿ ನೊಡಲಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಪುರಾವೆಗಳು ದೊರೆತಿರುವುದಿಲ್ಲ ಈ ಕುರಿತು ನಿ ಪಿ 57 ಮತ್ತು 58 ರಂತೆ ಪೋಟೋ ಮತ್ತು ನಿ ಪಿ 96 ರಂತೆ ವಿಡಿಯೋ ಮಾಡಿಕೊಂಡಿದ್ದೆ. ನಿ ಪಿ 56 ಪಂಚನಾಮೆ ವೇಳೆ ವಿಡಿಯೋ ಮತ್ತು ಪೋಟೋ ತೆಗೆದ ಅಂಜನಿ ರೆಡ್ಡಿ ಎ.ಹೆಚ್.ಸಿ-85 ಮತ್ತು ನಾಗರಾಜ ಎ.ಹೆಚ್.ಸಿ-80 ರವರಿಂದ ನಿಪಿ 110 ರಂತೆ ಕಲಂ 65(ಬಿ) ಐ.ಇ ಯಾಕ್ಟ್ ಅಡಿಯಲ್ಲಿ ದೃಢಿಕರಣ ಪತ್ರ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ನಿ ಪಿ 56 ರಲ್ಲಿ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿ ಪಿ 56 (ಡಿ) ಎಂದು ಗುರ್ತಿಸಲಾಯಿತು.

ದಿನಾಂಕ:-16.06.2021 ರಂದು ನದಾಫ್ ಲಾಡ್ಜ್ ಮಾಲಿಕರಾದ ಚಾ ಸಾ 23 ದೌಲಸಬಾ ಮತ್ತು ಲಾಡ್ಜ್ ನಲ್ಲಿ ಕೆಲಸ ಮಾಡುತ್ತಿದ್ದ ಚಾ ಸಾ 27 ಮಂಜು ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಸಾಕ್ಷಿದಾರರಾದ ಚಾ ಸಾ 37 ಹೇಮಲತಾ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾ ಸಾ 23 ರವರು ನಿ ಪಿ 39 ರಂತೆ, ಚಾಸಾ 27 ರವರು ನಿ ಪಿ 66 ರಂತೆ, ಚಾ ಸಾ 37 ರವರು ನಿ ಪಿ 59 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.

ದಿನಾಂಕ:-16.06.2021 ರಂದು ಚಾ ಸಾ 15 ಅನುಪ್ ಕುಮಾರ್ ರವರು ಮರುಹೇಳಿಕೆಯನ್ನು ನಿ ಪಿ 52 ರಂತೆ ಮತ್ತು ಪಿರ್ಯಾದುದಾರರ 2 ನೇ ಮರುಹೇಳಿಕೆಯನ್ನು ನಿ ಪಿ 16 ರಂತೆ ನೀಡಿದ್ದರು.

ದಿನಾಂಕ:-16.06.2021 ರಂದು ಹೊಸಪೇಟೆಯ ನದಾಫ್ ಲಾಡ್ಜ್ ನ ಚಾಸಾ 23 ದಾವುಲ್ ಸಾಬ್ ರವರಿಗೆ ನೋಟಿಸ್ ನೀಡಿ 20.03.2021 ರಂದು ಮಲ್ಲಯ್ಯ ರಾಮಲಕ್ಷ್ಮೀ ಮತ್ತು ಜಯಮ್ಮ ರವರಿಗೆ ಲಾಡ್ಜ್ ಕೊಟ್ಟ ಬಗ್ಗೆ ದಾಖಲಾತಿಗಳು ಮತ್ತು ಸಿ.ಸಿಟಿವಿ ಪುಟೇಜ್ ಒದಗಿಸುವಂತೆ ಮನವಿ ಪತ್ರ ಕೊಟ್ಟನು. ಸಾಕ್ಷಿ ಸದರಿ ನೋಟೀಸ್ ನೋಡಿ ಗುರುತಿಸಿದ್ದು ಅದನ್ನು ನಿಪಿ 136 ಎಂದು, ಸಾಕ್ಷಿ ಸಹಿಯನ್ನು ನಿಪಿ 136 ಎ ಎಂದು ಹಾಗೂ ಚಾಸಾ 23 ರವರ ಸಹಿಯನ್ನು ನಿಪಿ 136 ಬಿ ಎಂದು ಗುರ್ತಿಸಲಾಯಿತು.

ದಿನಾಂಕ:-16.06.2021 ರಂದು ಹೊಸಪೇಟೆಯ ನದಾಫ್ ಲಾಡ್ಜ್ ನ ಮಾಲಿಕ ದಾವುದ್ ರವರು ದಿನಾಂಕ:-20.03.2021 ರಂದು ಲಾಡ್ಜ್‌ನಲ್ಲಿ ತಂಗಿದವರ ಮಾಹಿತಿಯನ್ನು ದಾಖಲಾತಿಯೊಂದಿಗೆ ಹಾಜರು ಪಡಿಸಿರುತ್ತಾರೆ. ಮತ್ತು ಡಿ.ವಿ.ಆರ್ ನಲ್ಲಿ 15 ದಿನಗಳ ಮಾಹಿತಿ ಸಂಗ್ರಹವಾಗುತ್ತಿದ್ದು ಇದರಿಂದ ಹಳೆಯ ಮಾಹಿತಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 137 ಎಂದು ಸಾಕ್ಷಿಯ ಸಹಿಯನ್ನು 137 ಎ ಎಂದು, ಚಾಸಾ 23 ರವರ ಸಹಿಯನ್ನು ನಿಪಿ 137 ಬಿ ಎಂದು ಗುರ್ತಿಸಲಾಯಿತು.

ದಿನಾಂಕ:-16.06.2021 ರಂದು ಬಳ್ಳಾರಿ ಫೆಡ್ ಬ್ಯಾಂಕಿಗೆ ಸಂಬಂಧಿಸಿದಂತೆ ದಿನಾಂಕ:-17.04.2021 ರ ಸಿ.ಸಿ.ಟಿ.ವಿ ಪುಟೇಜ್ ಒದಗಿಸುವಂತೆ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಿದೆನು. ಸಾಕ್ಷಿ ಸದರಿ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 138 ಎಂದು, ಸಾಕ್ಷಿಯ ಸಹಿಯನ್ನು 138 ಎ ಎಂದು ಗುರ್ತಿಸಲಾಯಿತು. ಫೆಡ್ ಬ್ಯಾಂಕ್ ರವರು ದಿನಾಂಕ: 01.07.2021 ರಂದು ನೀಡಿದ್ದ ವರದಿ ನೋಡಿ ಸಾಕ್ಷಿ ಗುರ್ತಿಸಿದ್ದು ಅದನ್ನು ನಿಪಿ 139 ಎಂದು, ಸಾಕ್ಷಿಯ ಸಹಿಯನ್ನು ಸಹಿಯನ್ನು 139 ಎ ಎಂದು ಗುರ್ತಿಸಲಾಯಿತು.

ನ್ಯಾಯಾಲವು ಹೊರಡಿಸಿದ ಮನೆ ಶೋಧನ ವಾರೆಂಟ್ ನ್ನು ಈ ಕೇಸ್ನಲ್ಲಿಯ ಆರೋಪಿ-1 ಎನ್.ಅಗಸರ ಮಲ್ಲಯ್ಯ ರವರ ಹೆಂಡತಿ ಹೇಮಲತಾ ರವರಿಗೆ ದಿನಾಂಕ:-16.06.2021 ರಂದು ಪಂಚರ ಸಮಕ್ಷಮ ನಾನು ಜಾರಿ ಮಾಡಿರುತ್ತೇನೆ. ಮತ್ತು ಮೃತ ಜಯಮ್ಮ ರವರ ಮಗಳು ಶ್ರೀಮತಿ ಶ್ರಾವಣಿ ರವರಿಗೆ

ದಿನಾಂಕ:-01.07.2021 ರಂದು ಮಪಿ.ಎಸ್.ಐ ಶಾರದಾ ರವರ ಮುಖಾಂತರ ಶೋದನೆ ವಾರೆಂಟನ್ನು ಜಾರಿ ಮಾಡಿಸಿರುತ್ತೇನೆ. ಸಾಕ್ಷಿಯು ಸದರಿ ಶೋಧನಾ ವಾರಂಟು ಗುರ್ತಿಸಿದ್ದು ಅದನ್ನು ನಿಪಿ 140 ಎಂದು, ಸಾಕ್ಷಿಯ ಸಹಿಯನ್ನು ಸಹಿಯನ್ನು 140(ಎ) ಎಂದು ಗುರ್ತಿಸಲಾಯಿತು.

ಈ ಕೇಸಿನ ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮೀ ಗೆ ಅಪಹರಣ ಮಾಡಿ ಕೊಲೆ ಮಾಡಲು ಉಪಯೋಗಿದ ಕಾರನ್ನು ಆರೋಪಿ 4 ರಾಮಂಜನಿ ರವರು ಅವರ ಸ್ನೇಹಿತ ಚಾಸಾ 28 ಶೇಖರ ಫೋನ್ ಮಾಡಿ ಚಾಸಾ 26 ರಮೇಶ್ ಎಂಬ ಚಾಲಕನಿಂದ ತರಿಸಿಕೊಂಡಿದ್ದ ಕಾರನ್ನು ಚಾಲಕ ಚಾಸಾ 26 ರಮೇಶ ಮತ್ತು ಮಾಲಕ ಚಾಸಾ 29 ಬಿ.ಸಿ ಸಾಗರ್ ರವರು ಹಾಜರು ಪಡಿಸಿದ ಕೆ.ಎ-18 ಪಿ-1523 ಕಾರನ್ನು ದಿನಾಂಕ:-17.06.2021 ರಂದು ಮದ್ಯಾಹ್ನ 01.15 ಗಂಟೆ ಯಿಂದ ಮದ್ಯಾಹ್ನ 02.00 ಗಂಟೆಯವರೆಗೆ ಠಾಣೆಯ ಆವರಣದಲ್ಲಿ ಚಾಸಾ 6 & 7 ಪಂಚರ ಸಮಕ್ಷಮ ನಿಪಿ 61 ರಂತೆ ಪಂಚನಾಮೆ ಮೂಲಕ ಸ್ವಾದಿನಕ್ಕೆ ತೆಗೆದುಕೊಂಡು ನಿಪಿ 62 & 63 ರಂತೆ ಭಾವ ಚಿತ್ರ ತೆಗೆಯಲಾಯಿತು. ಈ ಕಾರನ್ನು ಠಾಣೆಯ ಪಿ.ಎಫ್. ನಂ:-39/2021 ರಲ್ಲಿ ನೊಂದಾಯಿಸಿ ಪರವಾನಿಗೆಗಾಗಿ ಮಾನ್ಯ ಘನ ನ್ಯಾಯಾಲಯದಲ್ಲಿ ನಿವೇದಿಸಿಕೊಂಡಿರುತ್ತದೆ. ಸಾಕ್ಷಿ ನಿಪಿ 61 ರಲ್ಲಿ ತನ್ನ ಸಹಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 61 ಡಿ ಎಂದು ಗುರ್ತಿಸಲಾಯಿತು.

ದಿನಾಂಕ:-17.06.2021 ರಂದು ಸಾಕ್ಷಿದಾರರಾದ ಚಾಸಾ 26 ರಮೇಶ ರವರ ಹೇಳಿಕೆಯನ್ನು ನಿಪಿ 64 ರಂತೆ ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರಾದ ಚಾಸಾ 29 ಸಾಗರ್ ರವರ ಹೇಳಿಕೆಯನ್ನು ನಿಪಿ 67 ರಂತೆ ಪಡೆದುಕೊಂಡಿರುತ್ತೆನೆ. ಸಾಕ್ಷಿದಾರರಾದ ಚಾಸಾ 28 ಶೇಖರ್ ರವರ ಹೇಳಿಕೆಯನ್ನು ನಿಪಿ 54 ರಂತರ ಪಡೆದುಕೊಂಡಿರುತ್ತೇನೆ.

ಚಾಸಾ 29 ಸಾಗರ್ ರವರು ಕಾರಿನ ದಾಖಲಾತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ:-17.06.2021 ರಂದು ಸಾಕ್ಷಿದಾರರಾದ ಚಾಸಾ 30 ರಜಿಯಾ ರವರ ಹೇಳಿಕಯನ್ನು ನಿಪಿ 68 ರಂತೆ ಪಡೆದುಕೊಂಡಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ 31 ಮಮತಾ ರವರ ಹೇಳಿಕೆಯನ್ನು ನಿಪಿ 69 ಪಡೆದುಕೊಂಡಿರುತ್ತೇನೆ.

ಸಾಕ್ಷಿದಾರರಾದ ಚಾಸಾ 38 ಮಸ್ತಾನ ರವರ ಹೇಳಿಕೆಯನ್ನು ನಿಪಿ 55 ರಂತೆ ಪಡೆದುಕೊಂಡಿರುತ್ತದೆ. ನಂತರ ಮುಂದಿನ ತನಿಖೆಯನ್ನು ಚಾಸಾ 52 ರವರಿಗೆ ವಹಿಸಿಕೊಟ್ಟು ರಜೆಯ ಮೇಲೆ ತೆರಳಿದ್ದೆ. ನಂತರ ರಜೆಯಿಂದ ಬಂದು ಚಾಸಾ 52 ರವರು ಮಾಡಿದ ತನಿಹೆಯನ್ನು ಪರೀಕ್ಷಿಸಿ ನಂತರ ಮುಂದಿನ ತನಿಖೆಯನ್ನು ಮಾಡಿದ್ದೆ.

ದಿನಾಂಕ:20.07.2021 ರಂದು Sub DVN office LLC NO 3 sub DVN Ballari & ಹೊಳಗುಂದ Section ರವರಿಗೆ ಕಾಲುವೆಯಲ್ಲಿ ಶವಗಳ ಬಗ್ಗೆ ಪತ್ರ ಬರೆದಿದ್ದು ಸಾಕ್ಷಿ ಸದರಿ ಪತ್ರಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ 141 & 142 ಎಂದು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ಕ್ರಮವಾಗಿ 141 ಎ, 142 ಎ, ಎಂದು ಗುರ್ತಿಸಲಾಯಿತು.

ದಿನಾಂಕ:20.07.202 ರಂದು Sub DVN office LLC NO 4 sub DVN Adoni camp at Ballari ರವರಿಗೆ ಶವಗಳ ಮಾಹಿತಿ ಕುರಿತು ಪತ್ರ ಬರೆದಿದ್ದು ಸಾಕ್ಷಿ ಸದರಿ ಪತ್ರ ನೋಡಿ ಗುರ್ತಿಸಿದ್ದು ಅದನ್ನು ನಿಪಿ 143 ಎಂದು ಸಾಕ್ಷಿ ಸಹಿಯನ್ನು 143 ಎ ಎಂದು ಗುರ್ತಿಸಲಾಯಿತು. ದಿನಾಂಕ:-20.07.2021 ರಂದು 04 ಮೊಬೈಲ್ ಫೋನ್ ಗಳನ್ನು ಎಫ್.ಎಸ್.ಎಲ್ ಬೆಂಗಳೂರು ರವರು ವಿಶ್ಲೇಷಣೆಗಾಗಿ ಕಳುಹಿಸಿ ಅವರು ನೀಡಿದ ಸ್ವೀಕೃತಿ ಪತ್ರವನ್ನು ದಿನಾಂಕ:-21.07.2021 ರಂದು ಸ್ವೀಕರಿಸಿರುತ್ತೇನೆ. ಸದರಿ ಸ್ವೀಕೃತಿ ಪತ್ರವನ್ನು ನಿಪಿ-144 ಎಂದು, ಸಾಕ್ಷಿಯ ಸಹಿಯನ್ನು ನಿಪಿ-144(ಎ) ಎಂದು ಗುರುತಿಸಲಾಯಿತು.

ದಿನಾಂಕಃ 14.07.2021 ರಂದು ಪಿರ್ಯಾದಿರಾರ ಶ್ರಾವಣಿ ರವರು ನಿಪಿ 19 ರಂತೆ ಮರು ಹೇಳಿಕೆ ನೀಡಿರುತ್ತಾರೆ. ಅದರಲ್ಲಿ ತಾನು ಪಿರ್ಯಾದಿ ನೀಡುವಾಗ ರೆಡ್ಡಿ ಜನಾಂಗ ಎಂದು ತಿಳಿಸಿದ್ದು ತಮ್ಮ ದಾಖಲಾತಿ ಪ್ರಕಾರ ಎಸ್.ಸಿ ವಡ್ಡರ ಜನಾಂಗ ಎಂದು ತಿಳಿಸಿರುತ್ತಾರೆ.

ದಿನಾಂಕ;-15.07.2021 ರಂದು ಪಿರ್ಯಾದುದಾರರಾದ ಶ್ರಾವಣಿ, ಮೃತ ಜಯಮ್ಮ ಮತ್ತು ರಾಮಲಕ್ಷ್ಮೀ ರವರ ಜಾತಿ ಪ್ರಮಾಣ ಪತ್ರ ನೀಡುವಂತೆ ಹಾಗೆಯೆ ಆರೋಪಿ ಮಲ್ಲಯ್ಯ, ನಾಗರಾಜ, ರಾಮಂಜನಿ, ರವರ ಜಾತಿ ಪ್ರಮಾಣ ಪತ್ರ ನೀಡುವಂತೆ ಮನವಿ ಪತ್ರವನ್ನು ತಹಸೀಲ್ದಾರ್ ಬಳ್ಳಾರಿ ರವರಿಗೆ

ಸಲ್ಲಿಸಲಾಯಿತು. ಸದರಿ ಮನವಿ ಪತ್ರವನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ 145 & 146 ಎಂದು, ಸಾಕ್ಷಿಯ ಸಹಿಯನ್ನು 145 ಎ & 146 ಎ ಎಂದು ಗುರ್ತಿಸಲಾಯಿತು.

ದಿನಾಂಕ:-21.07.2021 ರಂದು ಠಾಕೂರ್ ನಾಯ್ಕ್ ಸಿ.ಹೆಚ್.ಸಿ-425 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ: 22.07.2021 ರಂದು ಸೆಕ್ಷನ್ ಆಫೀಸರ್ ಹೊಳಗುಂದ, ಆದೋನಿ ಸಬ್ ಡಿವಿಶನ್ ರವರ ಶವಗಳು ಪತ್ತೆಯಾಗದ ಬಗ್ಗೆ ವರದಿ ನೀಡಿದ್ದು ಸಾಕ್ಷಿ ಸದರಿ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ 147 ಎಂದು, ಸಾಕ್ಷಿಯ ಸಹಿಯನ್ನು 147 ಎ ಎಂದು ಗುರ್ತಿಸಲಾಯಿತು.

ದಿನಾಂಕ:-24.07.2021 ರಂದು ಶಾರದಾ ಪಿ.ಎಸ್.ಐ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ:-01.08.2021 ರಂದು ಶೇಕ್ಷವಲಿ ಎ.ಎಸ್.ಐ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ:-02.08.2021 ರಂದು ತಹಶೀಲ್ದಾರ ಬಳ್ಳಾರಿ ರವರು ಆರೋಪಿತರಾದ ಅಗಸರ ಮಲ್ಲಯ್ಯ, ರವರು ಮಡಿವಾಳ ಅಂತ, ನಾಗರಾಜ ರವರು ಬೆಸ್ತಾ ಅಂತ, ರಾಮಂಜನೇಯ ಅಗಸರ ಜಾತಿ ಎಂದು ದೃಢಿಕರಣ ಪತ್ರ ನೀಡಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಹಾಗೇಯೆ ಪಿರ್ಯಾದಿದಾರರಾದ ಶ್ರಾವಣಿ, ಮೃತ ಜಯಮ್ಮ ಮತ್ತು ರಾಮಲಕ್ಷ್ಮೀ ರವರು ಆದಿ ಕರ್ನಾಟಕ ಜಾತಿಗೆ ಸೇರಿದವರು ಎಂದು ದೃಢಿಕರಣ ನೀಡಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 148 & 149 ಎಂದು, ಹಾಗೂ ಅವುಗಳಲ್ಲಿ ಸಾಕ್ಷಿಯ ಸಹಿಯನ್ನು 148 ಎ ಮತ್ತು ನಿಪಿ-149 ಎ ಎಂದು ಗುರ್ತಿಸಲಾಯಿತು.

ಈ ಕಾರಣದಿಂದ ಮಾನ್ಯ ನ್ಯಾಯಾಲಯಕ್ಕೆ ಈ ಪ್ರಕರಣದಲ್ಲಿ ಎಸ್.ಸಿ/ ಎಸ್.ಟಿ ಕಾಯ್ದೆ ಅಳವಡಿಸಿಕೊಳ್ಳಲು ಮನವಿ ಪತ್ರ ಸಲ್ಲಿಸಿರುತ್ತೇನೆ. ಸದರಿ ಮನವಿ ಪತ್ರವನ್ನು ನಿಪಿ-150 ಎಂದು, ಸಾಕ್ಷಿಯ ಸಹಿಯನ್ನು ನಿಪಿ-150(ಎ) ಎಂದು ಗುರ್ತಿಸಲಾಯಿತು.

ದಿನಾಂಕ:-02.08.2021 ರಂದು ಮಪಿಸಿ-1049 ಮೇರಿ ಲತಾ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆ. ಎಸ್ ಪಿ ಬಳ್ಳಾ4 ರವರ ಕಚೇರಿಯಿಂದ ಆರೋಪಿತರು ಹಾಗೂ ಮೃತರ ಮೊಬೈಲ್ ಸಂಖ್ಯೆಗಳ ಸಿಡಿ ಆರ್ ದಾಖಲೆಗಳನ್ನು ಪಡೆದುಕೊಂಡಿದ್ದೆ. ಅವುಗಳನ್ನುಒಟ್ಟಾಗಿ ನಿಪಿ-151 ಎಂದು ಗುರುತಿಸಲಾಯಿತು.

ನಂತರ ಈ ಕೇಸಿನ ಮುಂದಿನ ತನಿಖೆಯನ್ನು ಡಿ ಎಸ್ ಸಿ ಬಳ್ಳಾರಿ ನಗರ ರವರಿಗೆ ವಹಿಸಿಕೊಟ್ಟಿದ್ದೆ. ಸಾಕ್ಷಿಯು ನ್ಯಾಯಾಲಯಕ್ಕೆ ಈ ಪ್ರಕರಣದಲ್ಲಿ ಐ ಪಿ ಸಿ ಕಲಂ 302 ಮತ್ತು 201 ನ್ನು ಅಳವಡಿಸಿಕೊಳ್ಳಲು ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-152 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-152(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ**

ಸಾಕ್ಷಿಯು ತನಗೆ ಬಂದೋಬಸ್ತ್ ಕರ್ತವ್ಯ ಇರುವುದರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**